# ಡೋಲೊ 650

ಡೋಲೊ ಡೋಲೊ ಡೋಲೊ
ಎಲ್ರ ಬಾಯಲ್ಲೂ ಡೋಲೊ

ಅಜ್ಜ – ಅಜ್ಜಿಗಿ ಡೋಲೊ
ಅಪ್ಪ – ಅಮ್ಮಗೆ ಡೋಲೊ
ಅಕ್ಕ ಅಣ್ಣಗೆ ಡೋಲೊ
ಎಲ್ಲೆಂದ್ರಲ್ಲೂ ಎಲ್ರಿಗೂ ಬೇಕು

ಡೋಲೊ ಡೋಲೊ ಡೋಲೊ
ನಂಗೂ ಕೂಡಾ ಅದುವೆ
ಬೇಕಂತ ಬೇರೇ ಹೇಳಬೇಕೇನ್ರೋ..

ನೆಗಡಿ ಬಂದ್ರು ಡೋಲೊ
ಥಂಡಿ ಜ್ವರಕೂ ಡೋಲೊ
ಮೈಕೈ ನೋವಿಗೂ ಡೋಲೊ
ತಲೆನೋವಿಗೂನೂ ಡೋಲೊ
ಡಾಕ್ಟರ್ ಬರೆಯೋ ಚೀಟಿ ತುಂಬ
ಡೋಲೊ ಡೋಲೊ ಡೋಲೊ

ಕೊರೊನಾ ರೋಗ ಗೆಲ್ಲೊದಿಕ್ಕೆ
ಡೋಲೊ ಭಾರೀ ಚೊಲೊ
ಅಂತಿದ್ರಪ್ಪಾ ಊರಿನ ತುಂಬ
ಕೂಡಿದ ಮಂದಿ ಎಲ್ಲೂ
ಇದ್ರಿಂದೇನ್ರಾ ಖಾತ್ರಿಯಾಯ್ತಾ
ಕೊರೊನಾ ಕ್ರಿಮಿಯ ಸೋಲು..?
ನಾನು–ನೀನು ಎಲ್ಲೂ ಸೇರಿ
ತಿಂದ ಒಟ್ಟು ಡೋಲೊ
ಕಲಸಿ ಒಟ್ಟು ಮಾಡಿಬಿಟ್ರೆ
ಎಷ್ಟಾಯ್ತು ಇಲ್ಲಿ ಕೇಳೋ

ಆಗುತ್ತಂತೆ ಎವರೆಸ್ಟ್‌ಗಿಂತ
ದೊಡ್ಡದೊಂದು ಮಹಲು
ಪಡೆಯುತ್ತಂತೆ ಬುರ್ಜ ಖಲೀಫಾ
ಅದರ ಕೆಳಗಿನ ಸಾಲು
ಹೇಳ್ತಿದ್ರಪ್ಪಾ ತಿಳಿದ ಮಂದಿ
ಬೇಕಿದ್ರೆ ಗೂಗಲ್ನ ಕೇಳು!

■ ಸಿದ್ದನಗೌಡ ಬಿಜ್ಜೂರ, ಸರೂರ



ಶಿಲ್ಪಾ ಕಬ್ಬಿನಕಂತಿ

## ಕುಂಚ ಪ್ರಪಂಚ



ಜೀವಿಕಾ ಕಲ್ಲೇಗಾ
3ನೇ ತರಗತಿ








ನಿನಾದ್ ಕಾರಂತ್
3 ನೇ ತರಗತಿ
ಜೆ.ಜಿ.ಆರ್.ವಿ.ಕೆ.
ರಾಮಮೂರ್ತಿ ನಗರ
ಬೆಂಗಳೂರು



ಅನನ್ಯಾ ಮೋಹನ್
5ನೇ ತರಗತಿ
ಶ್ರೀ ಕುಮಾರನ್ಸ್ ಚಿಲ್ಡ್ರನ್
ಹೋಮ್ ಬೆಂಗಳೂರು

